ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 588
ಸದಸ್ಯರ ಹೆಸರು : ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್
ಉತ್ತರಿಸುವ ದಿನಾಂಕ : 22-07-2019
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಅ)	ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮೇಕಳ ಗ್ರಾಮಕ್ಕೆ ಮಂಜೂರಾದ ಹಿಂದುಳಿದ ವರ್ಗದ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯು ಇನ್ನೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈವರೆಗೆ ಸದರಿ ವಸತಿ ಶಾಲೆಯು ಪ್ರಾರಂಭವಾಗದಿರಲು ಕಾರಣಗಳೇನು;	ಈ ವಸತಿ ಶಾಲೆಗೆ ಅಗತ್ಯವಿರುವ ಹುದ್ದೆಗಳು ಮಂಜೂರು ಆಗಿರುವುದಿಲ್ಲ. ಹುದ್ದೆಗಳು ಮಂಜೂರಾದ ನಂತರ ವಸತಿ ಶಾಲೆಯನ್ನು ಪ್ರಾರಂಭಿಸಲಾಗುವುದು. ಈ ವಸತಿ ಶಾಲೆಗೆ ಅಗತ್ಯವಿರುವ ನಿವೇಶನ ಲಭ್ಯವಾದ ನಂತರ ಅನುದಾನದ ಲಭ್ಯತೆಗನುಗುಣವಾಗಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುವುದು.
ಆ)	2019-20 ನೇ ಶೈಕ್ಷಣಿಕ ವರ್ಷದಲ್ಲಿ ಯಾವಾಗ ವಸತಿ ಶಾಲೆಯನ್ನು ಪ್ರಾರಂಭಿಸಲಾಗುವುದು;	
ಇ)	ಸದರಿ ವಸತಿ ಶಾಲೆಯ ಸ್ವಂತ ಕಟ್ಟಡ ನಿರ್ಮಾಣವಾಗಿದೆಯೇ; ನಿರ್ಮಾಣವಾಗದೇ ಇದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಎಷ್ಟು ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ?	

ಸಕಇ 97 ಮೊದೇಶಾ 2019

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು